



ಪ್ರದರ್ಶಿಸಲಾಗಿತ್ತು. ಧಾರ್ಮಿಕ, ಪೌರಾಣಿಕ ಮತ್ತು ಸಾಹಿತ್ಯ ಮೂಲದ ದೃಶ್ಯಲೋಕಗಳೇ ಅಲ್ಲದೆ, ಗಾಂಧೀಜಿಯ ಪ್ರೀತಿಯ ಗ್ರಾಮೀಣ ಭಾರತದ ಹಲವು ದೃಶ್ಯಲೋಕಗಳು ಅಭಿವ್ಯಕ್ತಗೊಂಡಿದ್ದವು. ರಾಷ್ಟ್ರೀಯತೆಯ ಸಂವೇದನಾಶೀಲತೆಯು ಅವರ ಕೃತಿಗಳನ್ನು ಪ್ರಭಾವಿಸಿತ್ತು. ಕ್ರಿಸ್ತಶಕ 3ರಿಂದ 6ನೆಯ ಶತಮಾನದ ಅಜಂತಾ ಚಿತ್ರಶೈಲಿ, ಸಂಗೀತದ ರಾಗಗಳು ಮತ್ತು ಭರತನಾಟ್ಯದ ಹಲವಾರು ಭಂಗಿಗಳ ಪ್ರಭಾವ ಕಾಣಿಸಿಕೊಂಡಿರುವ ಚಿತ್ರಕೃತಿಗಳು, ಆಯಾ ಕಲಾ ಪ್ರಕಾರದ ದೈವಿಕ ಸೃಷ್ಟಿಶೀಲತೆಯನ್ನು ಅರಗಿಸಿಕೊಂಡಿವೆ. ಹಾಗಾಗಿ ಅವು ಅವನೀಂದ್ರನಾಥ ಟ್ಯಾಗೋರ್ ಮತ್ತು ನಂದಲಾಲ್ ಬೋಸ್ ಅವರುಗಳ ಹಾದಿಯ ಜಲವರ್ಣ ಮಾಧ್ಯಮದ ನಿಯಂತ್ರಿತ ಉನ್ನತಿಯನ್ನು ಸಾಧಿಸಿದ ತಂತ್ರಗಳ, ಕಲಾತ್ಮಕ ಲಯಬದ್ಧ ಶೈಲಿಯನ್ನು ಅನುಸರಿಸಿವೆ.